ದಿನಾಂಕ 14-01-2026 ರಂದು ಸಾಕ್ಷಿಗೆ ಪ್ರಮಾಣ ವಚನಬೋಧಿಸಿ ಪಾಟೀ ಸವಾಲಿಗೆ ಒಳಪಡಿಸಲಾಯಿತು.

<u>**ಪಾಟೀ ಸವಾಲು :**</u> ವಾದಿಗಳ ಪರ ಶ್ರೀ ವಾಯ್ ಎನ್ ಎ ವಕೀಲರಿಂದ .

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿನ ವಿಷಯಗಳು ನನಗೆ ಗೊತ್ತು. ಸಿ ಟಿ ಎಸ್ ನಂಬರ 2773 ಮೊದಲು ಪುರಸಭೆಯವರಿಗೆ ಸೇರಿದ್ದು. ಸಿ ಟಿ ಎಸ್ ನಂಬರ 2773 ನಮ್ಮ ಕುಟುಂಬದ ಪಿತ್ರಾರ್ಜಿತ ಆಸ್ತಿ ಅಲ್ಲ ಎಂದರೆ ಸರಿ. ಈ ಹಿಂದೆ ನೀವು ಮತ್ತು ನಿಮ್ಮ ಅಣ್ಣ ವಾದಿರವರು ದಾವಾ ಆಸ್ತಿಯನ್ನು ಖರೀದಿಸಲು ಯೋಚನೆ ಮಾಡಿದ್ದೀರಿ ಎಂದರೆ ಸಾಕ್ಷಿ ದಾವಾ ಆಸ್ತಿಗೆ ಯಾರು ಸಂಬಂಧ ಇಲ್ಲ ಎನ್ನುತ್ತಾರೆ. ಸಿ ಟಿ ಎಸ್ ನಂಬರ 2773 ಖರೀದಿಸಲು ನೀವು ಮತ್ತು ನಿಮ್ಮ ಅಣ್ಣ 1984 ರಲ್ಲಿ ಹಣ ಸಂಗ್ರಹಿಸಿ ದಾವಾ ಆಸ್ತಿಯನ್ನು ನಿಮ್ಮ ಹೆಸರಿನಲ್ಲಿ ಖರೀದಿಸಿದ್ದೀರಿ ಎಂದರೆ ಸರಿಯಲ್ಲ. ಸಾಕ್ಷಿ ನಾನೇ ಸ್ವತಃ ಖರೀದಿಸಿದ್ದೇನೆ ಎನ್ನುತ್ತಾರೆ. ನೀವು ವಾದಿಯ ತಮ್ಮ ಆಗಿದ್ದರಿಂದ ದಾವಾ ಆಸ್ತಿಯನ್ನು ನಿಮ್ಮ ಹೆಸರಿಗೆ ನೋಂದಣಿ ಮಾಡಿಸಿದರು ಎಂದರೆ ಸರಿಯಲ್ಲ. ಸಾಕ್ಷಿ ನಾನು ಖರೀದಿಸಿದ್ದೇನೆ ನನ್ನ ಹೆಸರಿನಲ್ಲಿ ನೋಂದಣಿ ಆಗಿದೆ ಎನ್ನುತ್ತಾರೆ. ದಾವಾ ಆಸ್ತಿಯನ್ನು ಖರೀದಿಸುವ ಮೊದಲು ನೀವು ಮತ್ತು ನಿಮ್ಮ ಅಣ್ಣ ಒಟ್ಟು ಕುಟುಂಬದಲ್ಲಿ ಇದ್ದೀರಿ ಎಂದರೆ ಸರಿಯಲ್ಲ. ದಾವಾ ಆಸ್ತಿ ನಿಮಗೆ ಮತ್ತು ವಾದಿಗೆ ಸಂಬಂಧಿಸಿದ್ದು ಎಂದರೆ ಸರಿಯಲ್ಲ. ಸಾಕ್ಷಿ ದಾವಾ ಆಸ್ತಿ ನನಗೆ ಮಾತ್ರ ಸಂಬಂಧಿಸಿದ್ದು ಎನ್ನುತ್ತಾರೆ. ದಾವಾ ಆಸ್ತಿಯನ್ನು ಖರೀದಿಸಿದ ದಿನದಿಂದ ಅಪಸಾತ್ ವಾಟಣಿ ಮಾಡಿಕೊಂಡು ವ್ಯವಹಾರ ಮಾಡುತ್ತಿದ್ದೀರಿ ಎಂದರೆ ಸರಿಯಲ್ಲ. ದಿನಾಂಕ 29-05-1986 ರಂದು ನಮ್ಮ ಅಣ್ಣನಿಗೂ ಹಕ್ಕು ಇದೆ ಎಂದು ನಾನು ಮತ್ತು

ನನ್ನ ಅಣ್ಣ ಇಬ್ಬರೂ ಕೂಡಿ ದಾವಾ ಆಸ್ತಿಯನ್ನು  ಖರೀದಿಸಿದ್ದೇವೆ ಎಂದು ಜವಾಬು ಕೊಟ್ಟಿದ್ದೀರಿ ಎಂದರೆ ಸರಿಯಲ್ಲ. ಸಿ ಟಿ ಸರ್ವೇಯರ್ ಅಧಿಕಾರಿಗಳ ಮುಂದೆ ನಿಮ್ಮ ಅಣ್ಣನ ಹೆಸರು ಮತ್ತು ನಿಮ್ಮ ಹೆಸರು ಸಾಮಾಯಿಕದಲ್ಲಿ ನಮೂದಿಸಿ ಎಂದು ಹೇಳಿಕೆ ನೀಡಿದ್ದೀರಿ ಎಂದರೆ ಸರಿಯಲ್ಲ. ಸಾಕ್ಷಿಗೆ ನಿಪಿ 6 ಅನ್ನು ತೋರಿಸಿ ಕೇಳಲಾಗಿ ಅದರಲ್ಲಿ ನನ್ನ ಸಹಿ ಇರುವುದಿಲ್ಲ ಎನ್ನುತ್ತಾರೆ. ಸಿ ಟಿ ಸರ್ವೇಯರ್ ಅಧಿಕಾರಿಗಳ ಮುಂದೆ ನಿಮ್ಮ ಅಣ್ಣನ ಹೆಸರು ಮತ್ತು ನಿಮ್ಮ ಹೆಸರು ದಾವಾ ಆಸ್ತಿಯ ದಾಖಲೆಗಳಲ್ಲಿ ಸಾಮಾಯಿಕದಲ್ಲಿ ನಮೂದಿಸಿ ಎಂದು ಹೇಳಿಕೆ ನೀಡಿದ್ದರಿಂದ ದಾವಾ ಆಸ್ತಿಯ ಉತಾರದಲ್ಲಿ ನಿಮ್ಮ ಮತ್ತು ವಾದಿಯ ಹೆಸರು ಸಾಮಾಯಿಕದಲ್ಲಿ ನಮೂದಾಗಿದೆ ಎಂದರೆ ಸರಿಯಲ್ಲ. ಸಾಕ್ಷಿಗೆ ನಿಪಿ 2 ಅನ್ನು ತೋರಿಸಿ ಕೇಳಲಾಗಿ ಅದರಲ್ಲಿನ ಅಕ್ಷರಗಳು ನನಗೆ ತಿಳಿಯುವುದಿಲ್ಲ ಎನ್ನುತ್ತಾರೆ. ನಿಪಿ 2 ರಲ್ಲಿ ನಿಮ್ಮ ಮತ್ತು ವಾದಿಯ ಹೆಸರು ಸಾಮಾಯಿಕದಲ್ಲಿ ನಮೂದಾಗಿದೆ ಎಂದರೆ ಸರಿಯಲ್ಲ. ಇಬ್ಬರ ಹೆಸರೂ ಪಟ್ಟಣ ಪಂಚಾಯತಿ ದಾಖಲೆ ಪುಸ್ತಕದಲ್ಲಿ ನಮೂದಾಗಿದೆ ಎಂದರೆ ಸರಿಯಲ್ಲ, ನನ್ನ ಹೆಸರು ನಮೂದಾಗಿದೆ ಎನ್ನುತ್ತಾರೆ. ಪಟ್ಟಣ ಪಂಚಾಯತಿ ದಾಖಲೆಗಳಲ್ಲಿ ಸಿ ಟಿ ಎಸ್ ನಂಬರ ಬಿ643 ರಲ್ಲಿ ನಿಮ್ಮ ಹೆಸರು ದಾಖಲಾಗಿದೆ ಎಂದರೆ ಸಾಕ್ಷಿ ನನಗೆ ಗೊತ್ತಾಗುವುದಿಲ್ಲ ಎನ್ನುತ್ತಾರೆ. ಪಟ್ಟಣ ಪಂಚಾಯತಿ ದಾಖಲೆಗಳಲ್ಲಿ ಸಿ ಟಿ ಎಸ್ ನಂಬರ ಬಿ642 ರಲ್ಲಿ ವಾದಿಯ ಹೆಸರು ದಾಖಲಾಗಿದೆ ಎಂದರೆ ಸಾಕ್ಷಿ ನನಗೆ ಗೊತ್ತಾಗುವುದಿಲ್ಲ  ಎನ್ನುತ್ತಾರೆ. ಸಿ ಟಿ ಎಸ್ ನಂಬರ ಬಿ643 ಮತ್ತು ಬಿ642 ರ ಆಸ್ತಿಗಳು 1985-86  ರಲ್ಲಿ ದಾಖಲೆಗಳಲ್ಲಿ ಬಿ373 ಎಂದು ಇತ್ತು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ.ಆ ಆಸ್ತಿ ವಾದಿಯ ಹೆಸರಿನಲ್ಲಿ ಮಾತ್ರ ದಾಖಲಾಗಿತ್ತು ಎಂದರೆ ಸಾಕ್ಷಿ ನನಗೆ ನನ್ನ ಆಸ್ತಿಯ ಕುರಿತು ಮಾತ್ರ  ಗೊತ್ತು ಅವರ ಆಸ್ತಿಯ ಬಗ್ಗೆ ಗೊತ್ತಿಲ್ಲ ಎನ್ನುತ್ತಾರೆ. ಸಿ ಟಿ ಎಸ್ ನಂಬರ ಬಿ643  ಮತ್ತು ಬಿ642 ರ ಆಸ್ತಿಗಳು ಅಕ್ಕ ಪಕ್ಕ ಇವೆ ಎಂದರೆ  ಸರಿಯಲ್ಲ, ಸಾಕ್ಷಿ ಒಂದೇ ಆಸ್ತಿ ಇದೆ

ಅದು ನನ್ನ ಹಸೆರಿನಲ್ಲಿ ಇದೆ ಎನ್ನುತ್ತಾರೆ. ವಾದಿ ತನ್ನ ಪಾಲಿಗೆ ಬಂದ ಆಸ್ತಿಯನ್ನು ಬಾಡಿಗೆ ಕೊಟ್ಟಿದ್ದನು ಎಂದರೆ  ಸರಿಯಲ್ಲ. ನನ್ನ ಜಾಗದಲ್ಲಿ ನಾನು ಮೊಡಕಾ ವ್ಯಾಪಾರ ಮಾಡುತ್ತೇನೆ. ಸಿ ಟಿ ಎಸ್ ನಂಬರ ಬಿ643 ರಲ್ಲಿ ವ್ಯಾಪಾರ ಮಾಡಲು ಪಂಚಾಯತಿಯಿಂದ ಪರವಾನಿಗೆ  ಮತ್ತು ವಿದ್ಯುತ್ ಸಂಪರ್ಕ ಪಡೆದಿರುತ್ತೀರಿ ಎಂದರೆ ಸರಿ. ಸಿ ಟಿ ಎಸ್ ನಂಬರ ಬಿ642 ರಲ್ಲಿ ವ್ಯಾಪಾರ ಮಾಡಲು ಪಂಚಾಯತಿಯಿಂದ ವಾದಿಯರು ಪರವಾನಿಗೆ ಮತ್ತು ವಿದ್ಯುತ್ ಸಂಪರ್ಕ ಪಡೆದಿರುತ್ತಾರೆ ಎಂದರೆ ನನ್ನ ಅಂಗಡಿಯ ಪಕ್ಕದಲ್ಲಿ  ಯಾರು  ಇಲ್ಲ ಎನ್ನುತ್ತಾರೆ. ಸಿ ಟಿ ಎಸ್ ನಂಬರ ಬಿ643 ರಂತೆ ನಾನು ತೆರಿಗೆ ತುಂಬುತ್ತೇನೆ.  ಸಿ ಟಿ ಎಸ್ ನಂಬರ ಬಿ643 ರಂತೆ ವಾದಿಯೂ ಕೂಡ ತೆರಿಗೆ ತುಂಬುತ್ತಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. 1986 ರಿಂದ ಇವತ್ತಿನವರೆಗೂ ವಾದಿ ಮತ್ತು ನೀವು ದಾವಾ ಆಸ್ತಿಯ ಕಬ್ಜೆಯಲ್ಲಿ ಇದ್ದೀರಿ ಎಂದರೆ ಸಾಕ್ಷಿ ನಾನು ಒಬ್ಬನೇ ಇದ್ದೇನೆ ಎನ್ನುತ್ತಾರೆ. ಸಿ ಟಿ ಎಸ್ ನಂಬರ ಬಿ642 ವಾದಿ ಗಾಳಿ ತುಂಬುವ ಮಷಿನ್ ಅಳವಡಿಸಲು ಅನುಮತಿ ಪಡೆದಿದ್ದರು ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ವಾದಿಯ ಹೆಸರಿಗೆ ಯಾವ ಆಧಾರದ ಮೇಲೆ ದಾಖಲಾಗಿದೆ ಎಂದರೆ ಸಾಕ್ಷಿ ಆ ಜಾಗ ನನ್ನದು ಅವರು ಹೇಗೆ ತಮ್ಮ ಹೆಸರನ್ನು ನಮೂದಿಸಿಕೊಂಡಿದ್ದಾರೆ ಎಂದು ನನಗೆ ಹೇಳಲು ಆಗುವುದಿಲ್ಲ. ವಾದಿಯ ಹೆಸರು ದಾವಾ  ಆಸ್ತಿಯ ದಾಖಲೆಗಳಲ್ಲಿ ನಮೂದಾದ ಕುರಿತು ಯಾವುದಾದರೂ ಕಚೇರಿಯಲ್ಲಿ  ಪ್ರಕರಣ ಹೂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾದಂ., ಹಳಿಯಾಳ.